



ಚಿತ್ರಗಳು: ಆದಿತ್ಯ ಜಿ. ತಿಳಿ

# ಕರಾವಳಿಯ ಸತ್ಯಾರಾಧನೆಯ ಲೋಕ ದೈವಾರಾಧನೆಯೆಂಬ ತುಳುವ ನಂಬಿಕೆ

**ಜನವರಿಯ ಆರಂಭದ ಜೊತೆಗೆ ಜಾತ್ರೆ-ರಥೋತ್ಸವಗಳ ಸಂಭ್ರಮ ನಾಡಿನ ವಿವಿಧ ಭಾಗಗಳಲ್ಲಿ ತುಂಬಿಕೊಳ್ಳುತ್ತದೆ; ಇದೇ ಅವಧಿಯಲ್ಲಿ ಕರಾವಳಿಯಲ್ಲಿ 'ದೈವಾರಾಧನೆ'ಯ ಸಡಗರ. ಕೌಟುಂಬಿಕ ಹಾಗೂ ಸಾರ್ವತ್ರಿಕ ನೆಲೆಗಳಲ್ಲಿ ದೈವದ ಕೋಲಗಳು ನಡೆಯುತ್ತವೆ. ನೆಲಮೂಲದ ಈ ಧಾರ್ಮಿಕ ಆಚರಣೆಗಳು, ಕರಾವಳಿ ಜನರ ಪಾಲಿಗೆ ದೈವದ ನಂಬಿಕೆಯ ಪ್ರಶ್ನೆಯಷ್ಟೇ ಅಲ್ಲ, ಸತ್ಯದ ಆರಾಧನೆಯೂ ಹೌದು. ದೈವದ ಕೋಲಗಳೊಂದಿಗೆ ಹೆಣೆದುಕೊಂಡಿದ್ದ ಕೃಷಿ ಸಂಸ್ಕೃತಿ ಈಗ ಕ್ಷೀಣಿಸಿದ್ದರೂ, ಮನುಷ್ಯನ ಜೀವನದಲ್ಲಿ ಸತ್ಯ ಮತ್ತು ನೈತಿಕತೆ ಎಷ್ಟು ಮುಖ್ಯ ಎನ್ನುವುದನ್ನು ಈ ಆರಾಧನಾ ಸಂಸ್ಕೃತಿ ತಲೆಮಾರುಗಳಿಂದ ತಲೆಮಾರುಗಳಿಗೆ ಮನದಟ್ಟು ಮಾಡಿಸುತ್ತಲೇ ಇದೆ. ಅವಿಭಕ್ತ ಕುಟುಂಬಗಳು ಚೆಲ್ಲಾಪಿಲ್ಲಿಯಾಗುತ್ತಿರುವ ಸಂದರ್ಭದಲ್ಲಿಯೂ ದೈವಾರಾಧನೆ ಪದ್ಧತಿಯು ಕೌಟುಂಬಿಕ ಏಕತೆಯನ್ನು ಬೆಂಬಲಿಸುತ್ತದೆ. 'ಕೋಲದ ಕಾಲ' ಆರಂಭಗೊಂಡಿರುವ ಸಂದರ್ಭದಲ್ಲಿ, 'ದೈವಾರಾಧನೆ ಸಂಸ್ಕೃತಿ'ಯ ವಿವಿಧ ಆಯಾಮಗಳ ಬಗ್ಗೆ 'ಸುಧಾ' ವಿಶ್ಲೇಷಣೆ.**

■ ಕೋಡಿಬೆಟ್ಟು ರಾಜಲಕ್ಷ್ಮಿ